**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್ ಇವರು ನಿಯಮ 72ರ ಅಡಿಯಲ್ಲಿ ನೀಡಿರುವ ಸೂಚನೆಗೆ ಉತ್ತರ.**

**ಪ್ರಶ್ನೆ :-**

ಬೆಂಗಳೂರು ನಗರ, ಕತ್ರಿಗುಪ್ಪೆ ಗ್ರಾಮದ ಸರ್ವೆ ನಂ.15/1 ರಲ್ಲಿ ಸಾರ್ವಜನಿಕರ ಉದ್ದೇಶಕ್ಕಾಗಿ ಕಾಯ್ದಿರಿಸಲಾದ ನಿವೇಶನವನ್ನು ಕೆಲವು ಭೂಗಳ್ಳರು ನಕಲಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಅತಿಕ್ರಮಿಸಿಕೊಂಡಿದ್ದು ಇದನ್ನು ರಕ್ಷಿಸಿ ಆ ಭಾಗದ ಅಗತ್ಯ ಸಾರ್ವಜನಿಕ ಸೌಲಭ್ಯಕ್ಕೆ ಬಳಕೆ ಮಾಡುವ ಕುರಿತು.

**ಉತ್ತರ :-**

ಬೆಂಗಳೂರು ನಗರದ ಕತ್ರಿಗುಪ್ಪೆ ಗ್ರಾಮದ ಸ.ನಂ.15/1 ರಲ್ಲಿ ಪ್ರಾಧಿಕಾರದಿಂದ ಅನುಮೋದಿತ ಬಡಾವಣೆ ನಕ್ಷೆಯಲ್ಲಿ ಈ ಕೆಳಗಿನ ಸಿ.ಎ. ನಿವೇಶನವನ್ನು ಸಾರ್ವಜನಿಕ ಉಪಯೋಗಕ್ಕೆ ಕಾಯ್ದಿರಿಸಲಾಗಿದ್ದು, ವಿವರ ಈಕೆಳಕಂಡಂತಿರುತ್ತವೆ.

| ಕ್ರ.ಸಂ | ಸಿ.ಎ ನಿವೇಶನದ ವಿವರ | ಹಂಚಿಕೆ ವಿವರಗಳು |
|---|---|---|
| 1 | ಸಿ.ಎ ನಿವೇಶನ [1365.00 ಚ.ಮೀ] | ಸದರಿ ನಿವೇಶನವು ಹಂಚಿಕೆಯಾಗದೆ ಖಾಲಿ ಇರುತ್ತದೆ. ಈ ನಿವೇಶನದಲ್ಲಿ ತುಂಬ ಹಳೆ ಗುಜರಿ ವಾಹನಗಳನ್ನು ನಿಲ್ಲಿಸಿದ್ದು, ಅನುಪಯುಕ್ತ ಸೆಂಟ್ರಿಂಗ್ ಸಾಮಾನುಗಳನ್ನು ಶೇಖರಿಸಲಾಗಿರುತ್ತದೆ. |

ಮೇಲ್ಕಂಡ ಸಿ.ಎ. ನಿವೇಶನ ಸರ್ವೆ ನಂ.15/1 ರ ಬಗ್ಗೆ ಕರ್ನಾಟಕ ಮಾನ್ಯ ಉಚ್ಛನ್ಯಾಯಾಲಯದಲ್ಲಿ WP No.10335/2005 ದಾವೆಯನ್ನು ವಿದ್ಯಾಪೀಠ ಬಡಾವಣೆಯ ನಾಗರಿಕ ಹಿತರಕ್ಷಣಾ ಸಮಿತಿಯು ದಾಖಲಿಸಿದ್ದು, ದಿನಾಂಕ:05.07.2005ರ ತೀರ್ಪಿನಲ್ಲಿ ಆದೇಶಿಸಿರುವ ಸಂಗತಿಗಳ ಹಿನ್ನೆಲೆಯಲ್ಲಿ, ನಾಗರಿಕ ಹಿತರಕ್ಷಣಾ ಸಮಿತಿಯು ದಾವೆಯನ್ನು ಹಿಂಪಡೆದಿರುವುದರಿಂದ ಸದರಿ ದಾವೆಯನ್ನು ಮಾನ್ಯ ಉಚ್ಛನ್ಯಾಯಾಲಯವು ವಜಾಗೊಳಿಸಿ, ಆದೇಶಿಸಿರುತ್ತದೆ.

ಶ್ರೀ ಇ.ಶ್ರೀನಿವಾಸ್ ಮತ್ತು ಶ್ರೀ ಇ.ಗಣೇಶ್ ರವರು ಮಾನ್ಯ ಉಚ್ಛನ್ಯಾಯಾಲಯದಲ್ಲಿ WP No.12310/2007 ರಂತೆ ದಾವೆ ದಾಖಲಿಸಿದ್ದು, ದಿನಾಂಕ:04.03.2007 ರ ತೀರ್ಪಿನಲ್ಲಿ ವಾದಿಯವರಿಗೆ 17 ಗುಂಟೆ ಜಮೀನನ್ನು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಜಮೀನನ್ನು ತಮ್ಮ ಪರವಾಗಿ ಸಾಬೀತುಪಡಿಸಲು ಸೂಚಿಸಿ ದಾವೆಯನ್ನು ಮಾನ್ಯ ಉಚ್ಛನ್ಯಾಯಾಲಯವು ವಜಾಗೊಳಿಸಿದೆ.

ಮುಂದುವರೆದು, ಸದರಿ ಸಿ.ಎ ನಿವೇಶನ ಮೇಲೆ ಮಾನ್ಯ ನ್ಯಾಯಾಲಯದ ದಾವೆ ಸಂಖ್ಯೆ OS No.1738/2009 ರಲ್ಲಿ ದಾವೆ ದಾಖಲಾಗಿದ್ದು, ದಿನಾಂಕ:03.01.2015 ರ ತೀರ್ಪಿನಲ್ಲಿ ದಾವೆಯನ್ನು ವಜಾಗೊಳಿಸಲಾಗಿರುತ್ತದೆ. ಅದರಂತೆ ಪ್ರಾಧಿಕಾರದ ಮಾನ್ಯ ಆಯುಕ್ತರವರ ಆದೇಶದಂತೆ ಅಭಿಯಂತರ ಅಧಿಕಾರಿ-1 ರವರು ತೆರವು ಕಾರ್ಯಾಚರಣೆಗೆ ಆದೇಶ ನೀಡಿದ್ದು, ದಿನಾಂಕ:10.09.2015 ರಂದು ಕಾರ್ಯಾಚರಣೆಯನ್ನು ನಿಗಧಿಪಡಿಸಿ, ಪ್ರಾಧಿಕಾರದ ವಿಶೇಷ ಜಾಗೃತ ದಳದ ಪೋಲಿಸ್ ಅಧೀಕ್ಷಕರಿಗೆ ಸೂಕ್ತ ರಕ್ಷಣೆ ವ್ಯವಸ್ಥೆ ನೀಡಲು ಕೋರಲಾಗಿತ್ತು. ಆದರೆ, ಸದರಿ ಸ್ಥಳದ ಅನಧಿಕೃತದಾರರಾದ ಶ್ರೀ ಇ.ಗಣೇಶ್ ರವರು ದಾವೆ ಸಂಖ್ಯೆ RFA No.173/2015 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯ ನೀಡಿದ್ದ ತಡೆಯಾಜ್ಞೆಯ ಹಿನ್ನೆಲೆಯಲ್ಲಿ ತೆರವು ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗಿತ್ತು. ಮುಂದುವರೆದು, ಸದರಿ ಸಿ.ಎ ನಿವೇಶನದ ಸ್ವತ್ತಿನ ಸಂಖ್ಯೆ:480/1 ಎಂಬುದಾಗಿ ಉಲ್ಲೇಖಿಸಿ ಮೆ॥ ಓಂ ಶ್ರೀ ಸಿದ್ದಿಸುಬ್ರಮಣ್ಯ ಸ್ವಾಮಿ ದೇವಾಲಯ ಟ್ರಸ್ಟ್ ರವರು ಮಾನ್ಯ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ OS No.4632/2022 ಅನ್ನು ಶ್ರೀ ಇ. ಗಣೇಶ್ ಹಾಗೂ ಇತರರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಪ್ರತಿವಾದಿಯನ್ನಾಗಿಸಿ ದಾಖಲಿಸಿರುತ್ತಾರೆ. ಈ ದಾವೆಯು ಇತ್ಯರ್ಥವಾಗದೆ ಬಾಕಿ ಉಳಿದಿರುತ್ತದೆ. ದಾವೆ ಇತ್ಯರ್ಥವಾದ ನಂತರ ಸದರಿ ಸಿ.ಎ ನಿವೇಶನವನ್ನು ಪ್ರಾಧಿಕಾರದ ವಶಕ್ಕೆ ಪಡೆದು ಹಂಚಿಕೆ ಮಾಡಲಾಗುವುದು.

---

**ನಅಇ 389 ಬೆಂಭೂಸ್ವಾ 2022**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ